**<u>ಸಾಕ್ಷಿಯನ್ನು ದಿನಾಂಕ 04.08.2023 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಪಾಟೀಸವಾಲುಃ 1 ನೇ ಆರೋಪಿತನ ಪರ ಶ್ರೀ ಎನ್.ಎನ್.ಹೆಚ್.,ವಕೀಲರಿಂದ.</u>**

9. ನಾನು ಈಗ ಹೊಡೆದಾಟದ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿ ಇರುತ್ತೇನೆ. ಸಂತೋಷ ಕುಮಾರ, ಸುಮಿತ್ರ, ಸಾದಿಕ್, ಹಮೀರ್ ಮತ್ತು ಇತರರು ಸಹ ನಾನು ಈಗ ನ್ಯಾಯಾಂಗ ಬಂಧನದಲ್ಲಿರುವ ಪ್ರಕರಣದಲ್ಲಿ ಆರೋಪಿಗಳಾಗಿರುತ್ತಾರೆ. ನಾನು ಈಗ ನ್ಯಾಯಾಂಗ ಬಂಧನದಲ್ಲಿರುವ ಪ್ರಕರಣದಲ್ಲಿ ಬೇರೆ ಆರೋಪಿಗಳು ಖುಲಾಸೆ ಆಗಿರುತ್ತಾರೆ. ನಾನು ನ್ಯಾಯಾಗ ಬಂಧನದಲ್ಲಿರುವ ಪ್ರಕರಣದಲ್ಲಿ ಈ ಪ್ರಕರಣದ ಸಾಕ್ಷಿ ಮುಗಿಯುವ ಮೊದಲು ಜಾಮೀನಿನ ಮೇಲೆ ಹೊರಗೆ ಬಾರದಂತೆ ನನ್ನ ಮೇಲೆ ಒತ್ತಡ ಅಧಿಕಾರಿಗಳಿಂದ ಇರುತ್ತದೆ. ನಾನು ನ್ಯಾಯಾಧೀಶರ ಮುಂದೆ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರ ಹೇಳಿಕೆಯನ್ನು ಜೈಲಿನ ಅಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳು ಹೇಳಿಕೊಟ್ಟಂತೆ ಹೇಳಿರುತ್ತೇನೆ ಎಂದರೆ ಸರಿ.

10. ನಮ್ಮ ಸೆಲ್‌ಗಳ ಹೊರಗೆ ಹಿಂದಿನ ಕಾಲದ ದೊಡ್ಡ ಬೀಗಗಳನ್ನು ಹಾಕುತ್ತಾರೆ. ಸದರಿ ಬೀಗ ಒಂದು ಬಾಕ್ಸನ ಒಳಗಿದ್ದು, ಸದರಿ ಬೀಗವನ್ನು ಕೋಲು ಮತ್ತು ರಾಡಿನಿಂದ ಹೊಡೆದು ಮುರಿಯಲು ಸಾದ್ಯವಿಲ್ಲ. ಜೈಲಿನಲ್ಲಿರುವ ಸೆಲ್ ಮತ್ತು ಬ್ಯಾರಾಕುಗಳಿಗೆ ಈಗ ಮಾರುಕಟ್ಟೆಗಳಲ್ಲಿ ಲಬ್ಯವಿರುವ ಸ್ಟೀಲ್ ಬೀಗಗಳನ್ನು ಹಾಕುವುದಿಲ್ಲ. ನನಗೆ ಘಟನೆಯ ಬಗ್ಗೆ ಗೊತ್ತಾಗುವ ಹೊತ್ತಿಗೆ ಮಾಡೂರು ಯುಸೂಫನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. 1 ನೇ ಆರೋಪಿಯನ್ನು ಆಸ್ಪತ್ರೆಗೆ ಕೊಂಡೊಯ್ಯಲಾಗಿತ್ತು ಎಂದು ಪ್ರಶ್ನಿಸಲಾಗಿ, ಸಾಕ್ಷಿ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ನಾನು 1 ನೇ ಆರೋಪಿಯನ್ನು ಘಟನೆಯ ದಿನ ನೋಡಿಲ್ಲ. 1 ನೇ ಆರೋಪಿಗೆ ತೀವ್ರ ಪೆಟ್ಟಾದ ಬಗ್ಗೆ ಪೊಲೀಸರಿಂದ ಗೊತ್ತಾಗಿರುತ್ತದೆ.

11. ಆ ದಿನ ಎಲ್ಲ ಸೆಲ್ ಗಳ ಬೀಗಗಳನ್ನು ಜೈಲಿನ ವಾರ್ಡರರವರು ತೆಗೆದಿದ್ದರು. ಜೈಲಿನ ಚಾವಣಿ ಎತ್ತರ ಇರುತ್ತದೆ. ಚಾವಣಿ ಮತ್ತು ನೆಲದ ಮದ್ಯದಲ್ಲಿ ಹಲಗೆ ಹಾಕಿದ ಅಟ್ಟ ಇರುತ್ತದೆ.

ಚಾವಣಿಯಲ್ಲಿ ಮೇಲೆ ಹಂಚು ನಂತರ ರೀಪರ್ ಕೆಳಗೆ ಹಲಗೆಗಳು ಇರುತ್ತವೆ. ಸೆಲ್ ನಲ್ಲಿದ್ದ ಖೈದಿಗಳು ಹೇಗೆ ಹೊರಗೆ ಬಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಗಲಾಟೆಗೆ ಹೋಗುವುದು ಬೇಡ ಎಂದು ನನ್ನ ಸೆಲ್ ನಲ್ಲಿ ಕುಳಿತಿದ್ದೆ. ನಾನು ಗಣೇಶ ಶೆಟ್ಟಿಗೆ ಆದ ಹಲ್ಲೆಯನ್ನು ನೋಡಿಲ್ಲ.ಈ ಪ್ರಕರಣದಲ್ಲಿ ಮುಖ್ಯ ವಿಚಾರಣೆಯ ಸಾಕ್ಷ್ಯ ನುಡಿಯುವಾಗ ನಾನು ಮಂಗಳೂರು ಕಾರಾಗೃಹದಲ್ಲಿ ಒಂದು ತಿಂಗಳು ಪೂರ್ವದಿಂದ ಇದ್ದೆ. ಘಟನೆ ನಡೆದಾಗ ಇದ್ದ ಅಧೀಕ್ಷಕರೆ ಈಗಲೂ ಸಹ ಅಧೀಕ್ಷಕರಾಗಿ ಇರುತ್ತಾರೆ.

12. ನಾನು ಪೊಲೀಸ್ ಹೇಳಿಕೆಯಂತೆಯೇ ಸಾಕ್ಷಿ ನುಡಿಯಬೇಕು ಎಂದು ಜೈಲಿನ ಅಧಿಕಾರಿಗಳು ನನ್ನ ಮೇಲೆ ಒತ್ತಡ ಹೇರಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಾಗೇ ಹೇಳು ಎಂದು ನನಗೆ ಹೇಳಿದ್ದರು ಎಂದು ನುಡಿಯುತ್ತಾರೆ. ಅವರು ಹೇಳಿದಂತೆ ಸಾಕ್ಷಿ ಹೇಳದಿದ್ದರೇ ತೊಂದರೆ ಆಗಬಹುದು ಎಂದು ನಾನು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ. ಮುದ್ದೆಮಾಲುಗಳನ್ನು ನಾನು ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ನೋಡಿರುತ್ತೇನೆ. ನಾನು ಗುರುತಿಸಿದ ಮು.ಮಾ-4/ಬೀಗದ ಕೊಂಡಿ ಸ್ಟೀಲ್ ಕೊಂಡಿ ಆಗಿರುತ್ತದೆ. ನನಗೆ ಓದಲು ಬರುವುದಿಲ್ಲ. ಆ ದಿನ ಜೈಲಿನಲ್ಲಿ ದೊಂಬಿಯ ರೀತಿ ಗಲಾಟೆ ನಡೆದಿರುತ್ತದೆ. ನಾನು ದೊಂಬಿಯಲ್ಲಿ ಸಿಕ್ಕಿಹಾಕಿಕೊಳ್ಳುವುದು ಬೇಡ ಎಂದು ಬ್ಯಾರಾಕಿನಲ್ಲಿ ಕುಳಿತಿದ್ದೆ ಎಂದರೆ ಸರಿ. ಯಾರಿಗೆ ಹೇಗೆ ಹಲ್ಲೆ ಮಾಡಿದ್ದಾರೆ ಮತ್ತು ಹೇಗೆ ಪೆಟ್ಟಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**ಪಾಟೀಸವಾಲುಃ 2 ಮತ್ತು 3 ಆರೋಪಿತರ ಪರ ಶ್ರೀ ವಿ.ಕೆ. ವಕೀಲರಿಂದ.**

13. ಪೊಲೀಸರು ನನ್ನನ್ನು ಈ ಪ್ರಕರಣದ ಬಗ್ಗೆ ವಿಚಾರಣೆ ಮಾಡಿಲ್ಲ. ಗಲಾಟೆಯಾದ ಕೂಡಲೇ ಪೊಲೀಸರು ಜೈಲಿನ ಒಳಗೆ ಬಂದಿರುತ್ತಾರೆ.

ಉಳಿದಂತೆ ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**<u>ಪಾಟೀಸವಾಲುಃ ಉಳಿದ ಆರೋಪಿತರ ಪರ ವಕೀಲರಿಂದ.</u>**

ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**<u>ಪಾಟೀಸವಾಲುಃ ಸರಕಾರಿ ಅಭಿಯೋಜಕರಿಂದ ಅನುಮತಿಯ ಮೇರೆಗೆ</u>**

14. ದಿನಾಂಕ 03.06.2023 ರಂದು ನ್ಯಾಯಾಲಯದ ಮುಂದೆ ನನಗೆ ಪ್ರಕರಣದ ಬಗ್ಗೆ ಗೊತ್ತಿರುವ ವಿಚಾರವನ್ನು ನುಡಿದಿರುತ್ತೇನೆ ಎಂದರೆ ಸರಿ. ದಿನಾಂಕ 03.06.2023 ರಂದು ನ್ಯಾಯಾಲಯದ ಮುಂದೆ ನಾನು ಹೇಳಿರುವ ಸಾಕ್ಷ್ಯ ಸತ್ಯವಾಗಿರುತ್ತದೆ. ನನ್ನ ಕಲಂ 164 ರ ಹೇಳಿಕೆಯನ್ನು ನ್ಯಾಯಾಧೀಶರು ಓದಿ ಹೇಳಿ ನನಗೆ ಮನವರಿಕೆ ಮಾಡಿದ ನಂತರ ಸಹಿ ಮಾಡಿರುತ್ತೇನೆ. ದಿನಾಂಕ 09.11.2015 ರಂದು ನಾನು ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರಂತೆ ನಾನು ನ್ಯಾಯಾದೀಶರ ಮುಂದೆ ನನಗೆ ನೆನಪಿರುವ ಮತ್ತು ನೋಡಿರುವ ಘಟನೆಯ ಬಗ್ಗೆ ಹೇಳಿರುತ್ತೇನೆ ಎಂದರೆ ಸರಿ.

15. ನಾನು ಈಗ ಬಂಧನಲ್ಲಿರುವ ಪ್ರಕರಣದಲ್ಲಿ ದಸ್ತಗಿರಿಯಾಗುವ ಮೊದಲು ನಫಾಟೆ ರಫೀಕ ನನ್ನ ಮೇಲೆ 3 ಬಾರಿ ಹಲ್ಲೆಗೆ ಪ್ರಯತ್ನಿಸಿದ್ದ. ನಫಟೆ ರಫೀಕನ ಜನರು ನನ್ನ ಮೇಲೆ ಹಲ್ಲೆಗೆ ಪ್ರಯತ್ನಿಸಿದ್ದರು. ನನ್ನ ಮೇಲೆ ಕುಶಾಲನಗರ, ಕೂಡಿಗೆ ಮತ್ತು ಗುಡ್ಡೆಹೊಸುರಿನಲ್ಲಿ ಹಲ್ಲೆಗೆ ಪ್ರಯತ್ನಿಸಲಾಗಿರುತ್ತದೆ. ನನ್ನ ವಿರುದ್ದ ವಾರೆಂಟ್ ಇದ್ದುದ್ದರಿಂದ ಮತ್ತು ನಫಟೆ ರಫೀಕನ ಮೇಲೆ ಹೆದರಿಕೆ ಇದ್ದುದ್ದರಿಂದ ನಾನು ಪೊಲೀಸರಿಗೆ ಈ ಬಗ್ಗೆ ದೂರು ನೀಡಿಲ್ಲ. ಈ ಪ್ರಕರಣದಲ್ಲಿ ಹಾಜರಿರುವ ಆರೋಪಿಗಳ ಬಗ್ಗೆ ನನಗೆ ಹೆದರಿಕೆ ಇರುತ್ತದೆ ಎಂದರೆ ಸರಿಯಲ್ಲ.

16. ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಮತ್ತು ಮಡಿಕೇರಿ ಜಿಲ್ಲಾ ಕಾರಾಗೃಹದಲ್ಲಿ ಯಾವುದೇ ಅಧಿಕಾರಿಗಳು ಈ ಪ್ರಕರಣದಲ್ಲಿ ಸಾಕ್ಷ್ಯದ ಸಂಬಂಧ ಯಾವುದೇ ಒತ್ತಡ ಹೇರಿಲ್ಲ ಎಂದರೆ ಸರಿ. ಪೊಲೀಸರು ಸಹ ಯಾವುದೇ ಒತ್ತಡ ಹೇರಿಲ್ಲ ಎಂದರೆ ಸರಿ. ನಾನು ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಮುಖ್ಯ ವಿಚಾರಣೆಯ ಸಾಕ್ಷ್ಯಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ಎಲ್ಲ ವಿಷಯಗಳು ನೆನಪಿದ್ದರೂ ಉದ್ದೇಶಪೂರ್ವಕವಾಗಿ ಆರೋಪಿಗಳಿಗೆ ಶಿಕ್ಷೆ ತಪ್ಪಿಸಲು ನಾನು ಮುಖ್ಯವಿಚಾರಣೆಗೆ ವ್ಯತಿರಿಕ್ತವಾಗಿ ಸುಳ್ಳು ಸಾಕ್ಷ್ಯವನ್ನು ಆರೋಪಿಗಳ ಪರ ವಕೀಲರ ಪಾಟೀಸವಾಲಿನಲ್ಲಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.